

ಆ ವಿಚಾರ ಆಮೇಲೆ ಹೇಳುತ್ತೇನೆ ಬಿಡಿ. ಬೇಸರದ ವಿಚಾರ ಕೊನೆಯಲ್ಲಿ ಇಟ್ಟುಕೊಳ್ಳೋಣ.

ನನ್ನನ್ನು ಹಿಡಿದಿದ್ದು ನಾಗರಹೊಳೆ ಅರಣ್ಯ ವಲಯದ ಕಾಕನಕೋಟೆಯಲ್ಲಿ. ನಾನು ಬಹುತೇಕ ಕೆಲಸ ಮಾಡಿರುವುದೂ ಆಸುಪಾಸಿನಲ್ಲೇ. ಸದ್ಯ ನನ್ನ ವಾಸಸ್ಥಳ ಬಳ್ಳೆಯಲ್ಲಿ. ನಾವೆಲ್ಲ ಮೈಸೂರಿನವರೇ ನೋಡಿ. ನಮಗೂ ದಸರೆಗೂ ಬಿಡಿಸಲಾಗದ ಅನುಭಾವ. ಅದಕ್ಕಾಗಿಯೇ ನನಗೆ ದಸರೆಯಲ್ಲಿ ಅಂಬಾರಿ ಹೊರಲೂ ಜವಾಬ್ದಾರಿ ಕೊಟ್ಟರು. ನನಗೂ ಸಾಕಷ್ಟು ಅನುಭವ ಇದೆಯಪ್ಪಾ. 6 ಬಾರಿ ನಾನು ಅಂಬಾರಿ ಹೊತ್ತಿದ್ದೇನೆ. ಎಲ್ಲ ಸರಿಯಾಗಿ ಇದ್ದಿದ್ದರೆ ಈವರೆಗೆ 20 ಬಾರಿ ಹೊತ್ತಿರಬೇಕಿತ್ತು. ಬಲರಾಮ 14 ಬಾರಿ ಅಂಬಾರಿ ಹೊತ್ತು ನನಗೆ ಅವಕಾಶ ತಪ್ಪಿಸಿದ. ಆದರೆ, ಅದರಲ್ಲಿ ಬಲರಾಮನ ಪಾತ್ರ ಏನೂ ಇಲ್ಲ ಬಿಡಿ. ನನ್ನ ತಪ್ಪೂ ಇಲ್ಲ. ಆನೆಗಳಾದ ನಮ್ಮ ದೃಷ್ಟಿಕೋನವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಮನುಷ್ಯರ ದೃಷ್ಟಿಯಲ್ಲಿ ಘಟನೆಗಳನ್ನು ನೋಡುವುದರಿಂದ ನಮಗೆ ಅನ್ಯಾಯವಾಗಿಬಿಡುತ್ತದೆ. ಅದಕ್ಕಾಗಿ ನನಗೆ ಎಳ್ಳಷ್ಟೂ ಬೇಸರವಿಲ್ಲ. ಏಕೆಂದರೆ, ಅಂಬಾರಿ ಹೊರುವ ನರಕ ನನ್ನ ಶತ್ರುವಿಗೂ ಬೇಡ. ಅಂಬಾರಿ ಮೆರವಣಿಗೆಯನ್ನು ನಿಂತು ನೋಡುವಷ್ಟು ಸುಲಭ ಅಲ್ಲ ಅಂಬಾರಿ ಹೊರುವುದು. ಕೇಳಿ, ಯಾಕೆಂದು ಹೇಳುತ್ತೇನೆ.

ಈ ಚಿನ್ನದ ಅಂಬಾರಿ ತೂಕ ಎಷ್ಟು ಗೊತ್ತೇ? ಬರೋಬ್ಬರಿ 750 ಕೆಜಿ. ಇಷ್ಟೇ ಅಂದುಕೊಳ್ಳಬೇಡಿ– ಇನ್ನೂ ಇದೆ. ಅಂಬಾರಿಯನ್ನು ಬೆನ್ನ ಮೇಲೆ ಕೂರಿಸಿಬಿಟ್ಟರೆ ಅದೇನು ನಿಲ್ಲುತ್ತದೆಯೇ? ನನ್ನ ಬೆನ್ನ ಮೇಲೆ ವಿವಿಧ ಹೊದಿಕೆಗಳನ್ನು ಹಾಕಿ ಕಟ್ಟಬೇಕು. ಅದೂ ಒಂದು ಕಲೆಯೇ. ಅದನ್ನು ನೀವು ಖುದ್ದಾಗಿ ನೋಡಿ ಅನುಭವಿಸಬೇಕು. ಇದಕ್ಕೆ ಛಾಪು, ನಮ್ದಾ ಅಥವಾ ಗಾದಿ ಎನ್ನುತ್ತಾರೆ. ಜತೆಗೆ, ನನಗೆ ಒಡವೆ ಸಿಂಗಾರವೂ ಇರುತ್ತದೆ. ಇವೆಲ್ಲವನ್ನೂ ಸೇರಿ ನಾನು ಹೊರಬೇಕಾದ ಒಟ್ಟು ತೂಕ 1,200 ಕೆ.ಜಿ! ಇದನ್ನು ಹೊತ್ತು ನಾನು 5 ಕಿಲೋಮೀಟರ್ ನಡೆಯಬೇಕು. ಅಂತೂ 6 ಬಾರಿ ಹೊತ್ತು ಸಾಗಿದ್ದೇನೆ. ಈಗ ಈ ಸಲ 7ನೇ ಬಾರಿಗೆ ಸಜ್ಜಾಗಿದ್ದೇನೆ.

### ಆ ವಿಷ ಗಳಿಗೆ.!

ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ನನಗಿನ್ನೂ ಎಳೆಯ ವಯಸ್ಸು ಕಣ್ರೀ. ಆಗ ನೋಡಿ, ಒಂದು ಬಾರಿ ಅಂಬಾರಿ ಹೊತ್ತಿದ್ದೆ. ನಡುವೆ ಕಟ್ ಆಗಿಬಿಡ್ತು. ಆಮೇಲಿಂದ 2012ರಿಂದ ಶುರು ಮಾಡಿಕೊಂಡಿದ್ದೇನೆ. ನನಗೆ ಒದಗಿದ ಆ ವಿಷಮ ಗಳಿಗೆಯ ಬಗ್ಗೆ ಹೇಳಿಯೇಬಿಡುತ್ತೇನೆ ಕೇಳಿ...

ಹಿಂದೆಲ್ಲಾ ನಮ್ಮಂತಹ ಆನೆಗಳಿಗೆ ಮೈಸೂರು ಅರಮನೆಯ ಆವರಣದೊಳಗೆ ಸ್ನಾನ ಮಾಡಿಸುತ್ತಿರಲಿಲ್ಲ. ದೂರದ ಕಾರಂಜಿ ಕೆರೆಯಲ್ಲೇ ಮಜ್ಜನ. ಅರಮನೆಯಿಂದ ನಡೆದು ಸಾಗಿ ಅಲ್ಲಿ ಸ್ನಾನ ಮಾಡಿ ಮರಳಿ ಬರುತ್ತಿದ್ದೆವು. ಬಹದ್ದೂರ್ ಎಂಬ ಆನೆಯೊಂದಿತ್ತು. ಅದೀಗ ಬದುಕಿಲ್ಲ. ಅದರ ಮೇಲಿದ್ದ ಮಾವುತ ಅಂದು ಸಿಕ್ಕಾಪಟ್ಟೆ ಕುಡಿದುಬಿಟ್ಟಿದ್ದ ಕಣ್ರೀ. ಗ್ರಹಚಾರ ಅವನಿಗೂ ಕೆಟ್ಟಿತ್ತು, ನನಗೂ ಕೆಟ್ಟಿತ್ತು ಅನ್ನಿ. ಮಾವುತ ಆನೆ ಮೇಲಿಂದ ಕೆಳಗೆ ಬಿದ್ದು ಹೋದ. ಬಹದ್ದೂರ್ ನಡೆಯುವ ಭರದಲ್ಲಿ ಗಾಬರಿಯಾಗಿ ಮಾವುತನ ತಲೆಯ ಮೇಲೆ ಕಾಲಿಟ್ಟ. ಅಷ್ಟೇ ಆಗಿದ್ದರೆ ಏನೂ ಆಗುತ್ತಿರಲಿಲ್ಲ– ವೇನೋ. ಬಹದ್ದೂರ್ ಮುಂದಕ್ಕೆ ನಡೆದು ಹೋದ. ಅವನ ಹಿಂದೆ ನಡೆದು–